MR. SPEAKER.—I request the Hon. Minister for Transport to convey the feelings of the hon. Members to the Hon Chief Minister.

ಶ್ರೀ ಟಿ. ಚೌಡಯ್ಯ.—ಸ್ವಾಮಿ, ಚಿತ್ರದುರ್ಗ ನಗರದಲ್ಲಿ ನೀರಿನ ತೊಂದರೆ ಬಗ್ಗೆ ಗಮನ ಸೆಳೆಯುವ ಸೂಚನೆ ಕಳುಹಿಸಿ ಒಂದು ವಾರ ಆಯಿತು, ಇದುವರೆವಿಗೂ ಬಂದಿಲ್ಲ.

ಅಧ್ಯಕ್ಷರು.—ಬೇಗ ಹಾಕಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಬೆಂಗಳೂರಿನಲ್ಲಿ ಆದಂತಹ ಸಕ್ಕರೆ ಕಲಬೆರಕೆ ಮಂಡ್ಯಾದಲ್ಲೂ ಆಗಿದೆ. ಇದರ ಬಗ್ಗೆ ಮುಖ್ಯಮಂತ್ರಿಗಳು ಕಳೆದ ಮೂರು ದಿವಸದಿಂದ ಹೇಳಿಕೆ ಕೊಡುತ್ತೇನೆಂದು ಹೇಳುತ್ತಲೇ ಇದ್ದಾರೆ. ಇನ್ನೂ ಕೊಟ್ಟಿಲ್ಲ.

ಅಧ್ಯಕ್ಷರು.—ಮುಖ್ಯಮಂತ್ರಿಗಳಿಗೆ ಹೇಳಿಕಳುಹಿಸಿದ್ದೇನೆ. ಅವರು ಬಂದಾಗ ಏನು ಹೇಳುತ್ತಾರೋ ನೋಡೋಣ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ದೇವೇಗೌಡರು ಸರ್ಕಾರಿ ಸ್ಕೂಲ್ ಒಂದನ್ನು ನಾನೇ ತೆಗೆದು ಕೊಂಡು ಸಾವಿರಾರು ರೂಪಾಯಿಗಳನ್ನು ನುಂಗಿದ್ದಾರೆಂದು ಹೇಳಿದರು, ಬಹುಶಃ ಯಾರೋ ಅವರಿಗೆ ಮಿಸ್‌ಗೈಡ್ ಮಾಡಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಶಾಂತಿ ವರ್ಧಕ ವಿದ್ಯಾ ಸಂಸ್ಥೆಯನ್ನು ಬಹಳಷ್ಟು ವರ್ಷಗಳ ಹಿಂದೆಯೇ ಕಟ್ಟಿದ್ದರು. ಶ್ರೀಮಾನ್ ಡಿ. ದೇವರಾಜ ಅರಸ್ ಅವರು ಅಧಿಕಾರದಲ್ಲಿದ್ದಾಗ ೮ ವರ್ಷಗಳ ಕಾಲ ಛೇರ್ಮನ್ ಆಗಿದ್ದೆ. ಅದಕ್ಕೆ ಸಂಬಂಧಪಟ್ಟ ಎಲ್ಲಾ ಕಾಗದಪತ್ರಗಳು ಇವೆ, ಅವುಗಳನ್ನು ಬೇಕಾದರೆ ಒದಗಿಸುತ್ತೇನೆ.

೧೨-೫೦ ಪಿ. ಎಂ.

ಶ್ರೀ ಡಿ. ಜಯದೇವರಾಜ ಅರಸ್.—ಅಧ್ಯಕ್ಷರೆ, ನಿನ್ನೆ ಹೇಳಿಕೆಯ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಕೊಡುತ್ತೇವೆಂದು ಹೇಳಿದ್ದಾರೆ, ಅದು ಕ್ಲಾರಿಫೈ ಮಾಡಿದರೆ ಸರಿ ಹೋಗುತ್ತದೆ. ಇಲ್ಲದೇ ಹೋದರೆ ಸರಿಹೋಗುವುದಿಲ್ಲ.

ಶ್ರೀ ಎಂ. ವಿ. ರಾಜಶೇಖರನ್.—ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ. ನಾವು ಕೇಳಿದ ಪ್ರಶ್ನೆಗೆ ಅವರಿಂದ ಈಗ ಉತ್ತರ ಪಡೆಯಬಹುದು.

ಅಧ್ಯಕ್ಷರು.—ಅವರು ಈಗ ತಾನೇ ಬಂದಿದ್ದಾರೆ ಇನ್ನೂ ಸಾಕಷ್ಟು ಸಮಯ ಇದೆ, ಅವರು ವಿಚಾರ ಏನು ಅಂತ ತಿಳಿದುಕೊಂಡು ಹೇಳಲಿಕ್ಕೆ ಅವಕಾಶ ಕೊಡಬಾರದೆ ?

ಶ್ರೀ ಹೆಚ್. ಟಿ. ಚೌಡಯ್ಯ.—ಅಧ್ಯಕ್ಷರೆ, ಈಗಾಗಲೇ ಪಶ್ನೆರಡೂವರೆ ಗಂಟೆ ಆಗಿದೆ. ಇನು ಎಷ್ಟು ಹೊತ್ತು ಕುಳಿತುಕೊಳ್ಳಬೇಕು.

ಅಧ್ಯಕ್ಷರು.—ಮುಖ್ಯಮಂತ್ರಿಗಳು ಇಲ್ಲೇ ಇರುತ್ತಾರೆ, ಅವರು ಉತ್ತರ ಹೇಳುತ್ತಾರೆ. ಈಗ ಒಂದೆರಡು ಬಿಲ್ಲುಗಳು ಪಾಸ್ ಆಗಲಿ,

LEGISLATIVE BUSINESS

The Karnataka Village Panchayat and Local Boards (Amendment) Bill

(Discussion Continued)

† ಶ್ರೀ ವಿ. ಎಲ್. ಶಿವಪ್ಪ (ತಿಪಟೂರು).—ಸನ್ಮಾನ್ಯ ಅಧ್ಯಕ್ಷರೆ, ಈ ಕರ್ನಾಟಕ ವಿಲೇಜ್ ಪಂಚಾಯತ್ ಅಂಡ್ ಲೋಕಲ್ ಬೋರ್ಡ್ಸ್ ಅಮೆಂಡ್‌ಮೆಂಟ್ ಬಿಲ್‌ಗೆ ತಂದಿರತಕ್ಕ ಉದ್ದೇಶ ಬಹಳ ಗಹನವಾಗಿರುವಂತಾದ್ದು, ತಂದಿದ್ದೀರಿ, ಅದನ್ನು ನಾನು ಸಪೋರ್ಟ್ ಮಾಡಂತ್ತೇನೆ. ಪಂಚಾಯಿತಿಯ

ಕಾಯಿದೆಯ ಮೂಲಕ ಕಂದಾಯ ವಸೂಲಿ ಮಾಡುವುದಕ್ಕೆ ತಹಶೀಲ್ದಾರರಿಗೆ ಅಧಿಕಾರ ವಹಿಸಿಕೊಟ್ಟು ಅನೇಕ ವರ್ಷದಿಂದ ಕಂದಾಯ ವಸೂಲಿ ಆಗದೇ ಇದ್ದು ಇರುವುದರಿಂದ ಈಗ ಈ ಮಸೂದೆಯನ್ನು ತಂದಿರುವುದು ಒಳ್ಳೆಯದು. ಇಲ್ಲಿಯವರೆಗೂ ನಾವು ಕಂದಾಯವನ್ನು ಸರಿಯಾಗಿ ವಿಮರ್ಶೆ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಕಂದಾಯವನ್ನು ವಿಧಿಸುವುದಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಒಬ್ಬ ಅಸೆಸರ್ ನನ್ನು ಜಿಲ್ಲಾಧಿಕಾರಿಗಳವರು ನೇಮಕ ಮಾಡಿ ಕಂದಾಯ ಅಸೆಸ್‌ಮೆಂಟ್ ಮಾಡಬೇಕು. ಇದರಲ್ಲಿ ಅಸಿಸ್ಟೆಂಟ್ ಕಮಿಷನರ್ ಕೂಡ ಇರಬೇಕು ಎಂದು ಈ ಜಿಲ್ಲೆಯನ್ನು ತಂದಿದ್ದಾರೆ. ಆದರೆ ಇವತ್ತು ಸಾರ್ವಜನಿಕರ ಸೇವೆಯಲ್ಲಿ ತೊಡಗಿದ್ದವರ ಅಧಿಕಾರವನ್ನು ಹೊಟಕು ಮಾಡುತ್ತಾ ಬಂದಿದ್ದೇವೆ. ನಾಮಕಾವಸ್ಥೆಗೆ ಪಂಚಾಯಿತಿ ಛೇರ್‌ಮನ್‌ರು, ತಾಲೂಕು ಬೋರ್ಡ್ ಅಧ್ಯಕ್ಷರು ಇರಬೇಕಾಗಿದೆ. ಪೂರ್ಣ ಅಧಿಕಾರವನ್ನು ಅಧಿಕಾರಿಗಳಿಗೆ ಹಂಚಿಕೊಡುತ್ತಿದ್ದೇವೆ. ತಾಲ್ಲೂಕು ಬೋರ್ಡ್‌ನಲ್ಲಿ ನೋಡಿದರೆ ಒಂದು ಚೆಕ್ ಬರೆದು ಹಣ ಲೆಕ್ಕದುಕೊಳ್ಳುವಷ್ಟಕ್ಕೆ ಅಧಿಕಾರ ಆ ಬೋರ್ಡಿನ ಅಧ್ಯಕ್ಷರಿಗೆ ಇರುವುದಿಲ್ಲ. ಒಂದು ರೆಸಲ್ಯೂಷನ್ ಪಾಸ್ ಮಾಡಿ, ಎಸ್ಟಿಮೇಟ್ ಸ್ಯಾಂಕ್ಷನ್ ಮಾಡಿದರೆ ಆ ಕೆಲಸ ಎಷ್ಟಾಗಿರುತ್ತದೆ, ಎಷ್ಟು ಬಿಟ್ಟಿರುತ್ತದೆ, ಅದು ಅಧ್ಯಕ್ಷರ ಗಮನಕ್ಕೆ ಹೋಗುವುದಿಲ್ಲ. ಇಂತಹ ಎಲ್ಲಾ ಅಲ್ಲಿಯ ಅಧಿಕಾರ ಬಿ.ಡಿ.ಓ.ಗೆ ಇದೆ. ಇವೊತ್ತು ಪಂಚಾಯಿತಿಗಳಲ್ಲಿ ಅಸೆಸರ್ ಅಸೆಸ್ ಮಾಡುವಾಗ ಅಲ್ಲಿ ಏನಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಇದುವರೆಗೆ ವಿಲೇಜ್ ಅಕೌಂಟೆಂಟ್ ಏನೇನು ಮಾಡಿದ್ದಾರೆ ಎನ್ನುವುದು ತಪಸಿಗೆ ಗೊತ್ತಿದೆ. ಈ ವಿಧೇಯಕದ ರೀತ್ಯಾ ನೇರವಾಗಿ ಅಸೆಸ್‌ಮೆಂಟ್ ಮಾಡಿದವನನ್ನು ಅಧಿಕಾರಿಗಳು ನೋಟಿಫೈ ಮಾಡಬೇಕು. ಆನಂತರ ಆದರಲ್ಲಿ ಹೆಚ್ಚು ಕಡಿಮೆ ಆದಲ್ಲಿ ಅಸಿಸ್ಟೆಂಟ್ ಕಮಿಷನರ್ ಅವರ ಹತ್ತಿರ ಹೋಗಬೇಕು. ಇದೆಲ್ಲಾ ಇದೆ. ಈ ರೀತಿ ಆದರೆ ಇದು ಯಾವ ಪ್ರಜಾಪ್ರಭುತ್ವ ಖಾಸಗಿ ಜನರ ಕಷ್ಟ ಸುಖ ನೋಡುವವರು ಯಾರು ? ಇವೊತ್ತು ನಾಮಕಾವಸ್ಥೆಗೆ ಪಂಚಾಯಿತಿಯ ಅಧ್ಯಕ್ಷರಾಗಿರಬೇಕಾಗಿದೆ. ಎಲ್ಲಾ ಅಧಿಕಾರವನ್ನು ಅಧಿಕಾರಿಗಳ ಕೈಗೆ ಕೊಟ್ಟಿದ್ದೀರಲ್ಲಾ ಇದು ಪ್ರಜಾಪ್ರಭುತ್ವವೆ? ಇವೊತ್ತು ಯಾವ ಕಾನೂನು ತರಬೇಕಾದರೂ ಇದು ಗ್ರಾಮಾಂತರದ ಮೇಲೆ ಕೇಂದ್ರೀಕರಿಸಿರುತ್ತದೆ. ಟೆನನ್ಸಿ ಆ್ಯಕ್ ಏನು ತಂದಿದ್ದೀರಿ ಅದು ಗ್ರಾಮಾಂತರ ಪ್ರದೇಶದ ಜನರ ಮೇಲೆ ತಂದಿದ್ದೀರಿ. ಇನ್ನು ಸೀಲಿಂಗ್ ಲಿಮಿಟ್ ಅದು ಕೂಡ ಗ್ರಾಮಾಂತರ ಪ್ರದೇಶದ ಜನರ ಮೇಲೆ ಇದೆ. ಜೀಕಾದಷ್ಟು ಸಂಪತ್ತು ಇರುವ ಕಡೆ ನೀವು ಕಂದಾಯ ಹಾಕಲ್ಲಿ. ಪ್ರತಿಯೊಂದು ಪಕ್ಷದವರು ಸೋಷಿಯಾಲಿಸಂ ಹೇಳುತ್ತಿದ್ದಾರೆ. ಆದರೆ ದೊಡ್ಡವರ ಮೇಲೆ ಹೊತ್ತು ಇದರು ಕೈಹಾಕುವುದಿಲ್ಲ. ಇವೊತ್ತು ನೀವು ಅಸೆಸರ್ ನೇಮಕ ಮಾಡುವುದರಿಂದ ಏನಾಗುತ್ತದೆ ಅಂದರೆ, ಆತ ಕಂದಾಯವನ್ನು ಜಾಸ್ತಿ ಮಾಡಬೇಕಾಗಿದೆ, ನನಗೆ ಏನಾದರೂ ಕೊಟ್ಟರೆ ಕಡಿಮೆ ಮಾಡುತ್ತೇನೆ ಎಂದು ಹೇಳುವಂತಾಯ್ತು ಬರುತ್ತದೆ. ಹಿಂದೆ ೧೯೬೭ರಿಂದ ಈ ಪಂಚಾಯಿತಿ ಮತ್ತು ತಾಲೂಕು ಬೋರ್ಡುಗಳ ವಿಚಾರದ ಬಗ್ಗೆ ಕೊಂಡಜ್ಜಿ ಬಸಪ್ಪನವರ ಸಮಿತಿ ನೇಮಕ ಆಗಿತ್ತು. ಖಾಸಗಿ ಜಾಗೀರ್ ಅಧಿಕಾರ ಸಡಿಲುಪ ಸಲುವಾಗಿ ಆದರಲ್ಲಿ ತೀರ್ಮಾನವಾಗಿತ್ತು ಅಧಿಕಾರಿಗಳು ಎಲ್ಲಾ ಖಾಸಗಿಯವರ ಕೈಗೆ ಅಧಿಕಾರ ಹೊಗಬಾರದೆಂದು ಅಂತ ತಿಳಿದಿದ್ದರಿಂದ ಆ ಸಮಿತಿಯು ತೀರ್ಮಾನ ಅಲ್ಲಿಗೆ ನಿಂತು ಹೋಯಿತು. ಯಾವ ಪಂಚಾಯಿತಿ ಸಮಿತಿ ಇದೆ, ಅದಕ್ಕೆ ಅಸೆಸ್ ಮಾಡುವಂತಹ ಅಧಿಕಾರ ಕೊಟ್ಟು ಪಂಚಾಯಿತಿ ಸದಸ್ಯರು, ಅಧ್ಯಕ್ಷರು ಇದನ್ನು ತೀರ್ಮಾನ ಮಾಡಬೇಕು, ಹಾಗೇನಾದರೂ ಅನ್ಯಾಯವಾದರೆ ಅಸಿಸ್ಟೆಂಟ್ ಕಮಿಷನರ್‌ಗೆ ಅಪೀಲು ಹೋಗುವಂತೆ ಅವಕಾಶ ಇರಬೇಕು. ಹಾಗೆಯೇ ಕಾನೂನುಗಳನ್ನು ಮಾಡುವಾಗ ಖಾಸಗಿಯವರಿಗೆ ಅಧಿಕಾರ ಕೊಡದೇ ಹೋದರೆ ಕರಪ್‌ಷನ್ ಜಾಸ್ತಿಯಾಗುತ್ತದೆ. ಆದುದರಿಂದ ಖಾಸಗಿ ಜನರು ನಿರ್ಣಯ ಮಾಡುವಂತಹ ಅವಕಾಶ ಇರಬೇಕು. ಈ ದೃಷ್ಟಿಯಿಂದ ಈ ಅಧಿಕಾರಿಯನ್ನು ನೇಮಕ ಮಾಡುವ ಕಾರ್ಯದಲ್ಲಿ ಇನ್ನೂ ಕೂಲಂಕಷವಾಗಿ ವಿಚಾರ ಮಾಡಿ ಪೂರ್ಣವಾಗಿ ಅಭ್ಯಾಸ ಮಾಡುವುದು ಒಳ್ಳೆಯದು. ಆದುದರಿಂದ ಇದರ ಬಗ್ಗೆ ಇನ್ನೂ ಸಮಗ್ರವಾಗಿ ಆಲೋಚನೆ ಮಾಡುವುದು ಇದೆ. ಅದಕ್ಕೋಸ್ಕರ ಹಿಂದೆ ಈ ಸದನದಲ್ಲಿ ತೀರ್ಮಾನವಾಗಿದ್ದಂತಹ ಕೊಂಡಜ್ಜಿ ಬಸಪ್ಪನವರ ಸಮಿತಿ ತೀರ್ಮಾನ ಏನೆತ್ತು ಅದನ್ನು ಜಾರಿಗೆ ತರಬೇಕು. ಈಗ ತಂದಿರ ತಕ್ಕದ್ದನ್ನು ತಡೆಯಿಯಬೇಕು. ಈಗ ತಂದಿರತಕ್ಕದ್ದು ಸರಿ ಇದ್ದರೂ ಕೂಡ ಕ್ರಮ ಬದ್ಧವಾಗಿಲ್ಲ ಎಂದು ಹೇಳಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ಜಯದೇವರಾಜ ಅರಸ್ (ಚಾಮುಂಡೇಶ್ವರಿ).— ಸನ್ಮಾನ್ಯ ಅಧ್ಯಕ್ಷರೆ, ಈ ಒಂದು ತಿದ್ದುಪಡಿ ತಂದಿರತಕ್ಕದ್ದು ಸೂಕ್ತವಾಗಿದೆ ಎಂದು ಒಪ್ಪಿದರೂ ಕೂಡ ಕೆಲವು ನನಗೆ ನ್ಯೂನತೆಗಳು ಕಂಡು ಬಂದಿವೆ; ಪ್ರಮುಖವಾಗಿ ಅಸೆಸ್‌ಮೆಂಟ್ ಆಫೀಸರ್ ಅಸೆಸ್ ಮಾಡುವುದು ಸರಿ, ಎಲ್ಲಾ ಸರಿ, ಈ ತೀರ್ಮಾನ ಅಂತ್ಯವಾಗಬೇಕಾದರೆ ಇದುವರೆಗೂ ಪಂಚಾಯಿತಿ ತೀರ್ಮಾನ ಆಗಬೇಕು ಅಂತ ಇತ್ತು. ಈಗ ಪಂಚಾಯಿತಿ ಹೊರತೆಗೆದು ಅಧಿಕಾರಿಗಳು ನಡೆಸುವುದು ಆದಾಗ ಹಳ್ಳಿಯ ಜನರು ಇದರ ಬಗ್ಗೆ ಅಪೀಲು ಹಾಕುವುದಾದರೆ ಅಸಿಸ್ಟೆಂಟ್ ಕಮಿಷನರ್‌ಗೆ ಮಾಡಬೇಕಾಗಿದೆ ಒಬ್ಬ ಅಸಿಸ್ಟೆಂಟ್ ಕಮಿಷನರ್‌ಗೆ ಮೂರು ನಾಲ್ಕು ತಾಲ್ಲೂಕುಗಳು ಇರುತ್ತವೆ, ಮೂರು ನಾಲ್ಕು ತಾಲ್ಲೂಕು ಅಂದರೆ ಎಷ್ಟು ಪಂಚಾಯಿತಿಗಳು ಬರುತ್ತವೆ. ಅಷ್ಟು ಪಂಚಾಯಿತಿಗಳಿಂದ ಬರತಕ್ಕ ಅಪೀಲುಗಳನ್ನು ಇವರು ಯಾವ ಕಾಲಕ್ಕೆ ಇತ್ಯರ್ಥ ಮಾಡುತ್ತಾರೆ? ಕಡೆಗೆ ಕಂದಾಯ ಕಟ್ಟುವಾಗ ಇತ್ಯರ್ಥವಾಗದೇ ಉಳಿದಿರುವ ಲೆಕ್ಕ ತೆಗೆದುಕೊಂಡರು ಸಾವಿರಾರು ರೂಪಾಯಿ ಕಟ್ಟುವಂತಹ ಪರಿಸ್ಥಿತಿ ಬರಬಹುದು. ತಹಶೀಲ್ದಾರ್ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಇದೆಲ್ಲಾ ಇತ್ಯರ್ಥವಾಗಬೇಕು. ಅದಕ್ಕೆ ಮುಂಚೆ ಗ್ರಾಮ ಪಂಚಾಯತಿಯಲ್ಲಿ ಯಾರಿದ್ದಾರೆ ಅವರು ಜನಕ್ಕೆ ಸೂಕ್ತವಾಗಿ ಇದರ ಬಗ್ಗೆ ಒಂದು ಪರಿಹಾರ ಕೊಡುವಂಥ ವ್ಯವಸ್ಥೆಯನ್ನು ಇದರಲ್ಲಿ ಆಳವಡಿಸಿಲ್ಲ. ಇದರ ಜೊತೆಗೆ ಕ್ಲಾಸ್ ೧ರಲ್ಲಿ "The Panchayat shall afford all clerical and other necessary help to the assessor to discharge his duties under this Act and shall bear all incidental expenditure thereto..." ಎಂದು ತಾವು ಹಾಕಿದ್ದೀರಿ. ಅಂದರೆ ಸರ್ಕಾರದಲ್ಲಿರುವ ಸಿಬ್ಬಂದಿ ವರ್ಗದವರು ಹಾಗೂ ಗ್ರಾಮ ಪಂಚಾಯತಿಯ ಸಿಬ್ಬಂದಿ ವರ್ಗದವರು ಅವರಿಗೆ ಸಹಾಯ, ಸಹಕಾರ ನೀಡಬೇಕು ಎಂದಾಯಿತು ಈ ವಿಚಾರವಾಗಿ ನಾವು ಬಹಳಸಾರಿ ಇದನ್ನು ತಮ್ಮ ಗಮನಕ್ಕೆ ತಂದಿದ್ದೇವೆ ಇವತ್ತು ಏನಾಗಿದೆ ಎಂದರೆ ತಾಲ್ಲೂಕು ಮಟ್ಟದಲ್ಲಿ ಬೇಕಾದಷ್ಟು ಸಿಬ್ಬಂದಿವರ್ಗದವರು ಇದ್ದಾರೆ. ಅವರೆಲ್ಲರ ಸಂಬಳ ಮಗೈರೆಗಳಿಗೆ ತಾವು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೀರಿ. ಒಂದು ತಾಲ್ಲೂಕಿನಲ್ಲಿ ಒಂದು ತಿಂಗಳಿಗೆ ೭ ಲಕ್ಷದಿಂದ ೯ ಲಕ್ಷ ರೂಪಾಯಿಗಳವರೆಗೆ ನಾನಾ ಅಧಿಕಾರಿಗಳಿಗೆ ಸಂಬಳ ಕೊಡುತ್ತಿದ್ದೀರಿ. ಆದರೆ ಯಾವ ಕೆಲಸಗಳೂ ಸರಿಯಾಗಿ ಆಗುತ್ತಿಲ್ಲ. ಇವತ್ತು ಪುನಃ ಅಧಿಕಾರಿಗಳಿಗೆ ಬೇರೆ ಹೇರೆ ರೂಪದಲ್ಲಿ ಸಂಬಳ ಕೊಡುವುದಕ್ಕೆ ಅವಕಾಶ ಕೊಡುತ್ತಿದ್ದೀರಿ. ಇವತ್ತು ಯಾರ್ಯಾರಿಗೋ ಅಪಾಯಿಂಟ್‌ಮೆಂಟ್ ಆರ್ಡರ್‌ಗಳನ್ನು ಕೊಡುತ್ತಿದ್ದೀರಿ. ಅಲ್ಲಿ ರೆವಿನ್ಯೂ ಅಧಿಕಾರಿಗಳು ಇದ್ದಾರೆ, ರೆವಿನ್ಯೂ ಇನ್ಸ್‌ಪೆಕ್ಟರುಗಳು ಇದ್ದಾರೆ, ಬಿ.ಡಿ.ಒ. ಇದ್ದಾರೆ, ಎಕ್ಸ್‌ಟೆನ್‌ಷನ್ ಆಫೀಸರ್ಸ್ ಇದ್ದಾರೆ. ಅವರೆಲ್ಲಾ ಇರುವಾಗ ಈ ಆಸ್ಸೆಸಿಂಗ್ ಆಫೀಸರ್‌ಗೆ ಈ ಒಂದು ಅಧಿಕಾರವನ್ನು ಕಾನೂನು ರೀತ್ಯ ಏತಕ್ಕೆ ಕೊಡಬೇಕಾಗಿತ್ತು? ತಾವು ಇವತ್ತು ಅಸ್ಸೆಸಿಂಗ್ ಆಫಿಸರನ್ನು ನೇಮಕ ಮಾಡುವುದಕ್ಕೆ ಜಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದೀರಿ. ಈಗಿರತಕ್ಕಂಥ ಅಧಿಕಾರಿಗಳಿಗೆ ಲಕ್ಷಾಂತರ ರೂಪಾಯಿಗಳಷ್ಟು ಸಂಬಳ ಕೊಡುತ್ತಾ ಇರುವಾಗಲೂ ಕೂಡ ಸರಿಯಾದ ಪ್ರಮಾಣದಲ್ಲಿ ಕೆಲಸಗಳು ಆಗುತ್ತಿಲ್ಲ. ಆದ್ದರಿಂದ ಇಂತಹ ಸಮಯವಲ್ಲಿ ಅವರ ಒಂದು ಅವಶ್ಯಕತೆ ಏನಿತ್ತು ಎಂದು ತಮ್ಮನ್ನು ಕೇಳಬಯಸುತ್ತೇನೆ. ಇಂತಹ ಕೆಲವು ನ್ಯೂನ್ಯತೆಗಳನ್ನು ತಾವು ಸರಿಪಡಿಸುವುದಕ್ಕೆ ಅವಕಾಶ ಮಾಡದೇಹೋದರೆ ಈ ಒಂದು ಬಿಲ್ಲನ್ನು ತಾವು ಏನು ತಂದಿದ್ದೀರಿ ಅದು ಪುನಃ ತಮಗೆ ಶಿರೋಭಾರವಾಗುತ್ತದೆ. ಇನ್ನೊಂದು ವಿಚಾರವೇನೆಂದರೆ ತಾವು ೧೦ ಸಾವಿರ ರೂಪಾಯಿಗಳನ್ನು ಗ್ರಾಮಪಂಚಾಯತಿಯಲ್ಲಿ ಇಡುತ್ತೀರಿ. ಅದನ್ನು ಸಿಬ್ಬಂದಿವರ್ಗದವರಿಗೆ ಪೇಮೆಂಟ್ ಕೊಡುವುದಕ್ಕೆ ಉಪಯೋಗಿಸಿಕೊಳ್ಳಬೇಕೇ ಅಥವಾ ಗ್ರಾಮಾಭಿವೃದ್ಧಿ ಮಾಡುವುದಕ್ಕೆ ಉಪಯೋಗಿಸಿಕೊಳ್ಳಬೇಕೇ ಎಂಬುದನ್ನು ತಾವು ಸೂಚಿಸಿರುವುದಿಲ್ಲ. ಆಗ ಅವರು ಬಹಳ ಇಕ್ಕಟ್ಟಿನ ಪರಿಸ್ಥಿತಿಗೆ ಒಳಗಾಗುತ್ತಾರೆ. ಆದ್ದರಿಂದ ತಾವು ಇದನ್ನೆಲ್ಲಾ ಸರಿಪಡಿಸಿ ಆಳವಡಿಸಿಕೊಂಡು ಈ ಆಕ್ಟ್‌ನ್ನು ತಿದ್ದುಪಡಿ ಮಾಡಿ ತಂದು ಜಾರಿಗೆ ಕೊಟ್ಟರೆ ಇರತಕ್ಕಂಥ ಭಾರ ಹೋದಹಾಗೆ ಆಗುತ್ತದೆ. ಆ ರೀತಿ ಮಾಡಿದರೆ ಮಾತ್ರ ಗ್ರಾಮಪಂಚಾಯತಿಗಳ ಅಭಿವೃದ್ಧಿಯಾಗುತ್ತದೆ. ಇಲ್ಲದಿದ್ದರೆ ಅಭಿವೃದ್ಧಿಯಾಗುವುದಿಲ್ಲ ಎನ್ನುವಂಥ ಮಾತನ್ನು ನಾನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಗೆ ಗ್ರಾಮಪಂಚಾಯತಿ ಮಟ್ಟದಲ್ಲಿ ಅಸ್ಸೆಸ್‌ಮೆಂಟ್ ವಿಚಾರದಲ್ಲಿ ಅದನ್ನು ಅವರೇ ಪರಿಶೀಲಿಸುವ ಅವಕಾಶವನ್ನು ಅದರಲ್ಲಿ ಕಲ್ಪಿಸಿಕೊಡದೇ ಹೋದರೆ ಈ ಗ್ರಾಮ ಮಟ್ಟದಲ್ಲಿರತಕ್ಕಂಥ ಜನರಿಗೆ ಏನೊಂದು ನ್ಯಾಯ ಸಿಕ್ಕಬೇಕೋ ಅದು ಸಿಕ್ಕದ ಹಾಗೆ ಆಗಿ ದಿನಬೆಳಿಗ್ಗೆ ಯಾದರೆ ಅವರು ಕೋರ್ಟ್‌ಗೆ ಅಲೆಯತಕ್ಕಂಥ ಪರಿಸ್ಥಿತಿ ಇದ್ದೇ ಇರುತ್ತದೆ; ಅಥವಾ ಅವರ ಕೇಸ್‌ಗಳ ಬಗ್ಗೆ ಏನು ಮಾಡುತ್ತಾರೆ ಎಂಬುದು ಅವರಿಗೇ ಗೊತ್ತಾಗುವುದಿಲ್ಲ. ಇದರಿಂದ ಅವನು ಇನ್ನೂ ಹೆಚ್ಚಿನ ತೊಂದರೆಗೆ ಒಳಗಾಗುತ್ತಾರೆ. ಆದ್ದರಿಂದ ಅದಕ್ಕೆ ತಾವು ಅವಕಾಶ

ಕಲ್ಪಿಸಬಾರದು ಎಂದು ಹೇಳುತ್ತಿದ್ದೇನೆ. ಮತ್ತೆ ಗ್ರಾಮಪಂಚಾಯತಿಯಲ್ಲಿ ಇವತ್ತು ಸೆಕ್ರೆಟರಿಯೇಟ್ ಯಾರಿದ್ದಾರೆ ಅವನೇ ಅಕೌಂಟೆಂಟ್ ಆಗಿದ್ದಾನೆ. ಇದರಿಂದ ಕೆಲಸದ ಹೊರೆ ಅವನಿಗೆ ಜಾಸ್ತಿಯಾಗಿದೆ. ಆದ್ದರಿಂದ ಆ ಹುದ್ದೆಗೆ ಬೇರೆ ಸಿಬ್ಬಂದಿಯನ್ನು ನೇಮಕ ಮಾಡಬೇಕು. ತಾವು ಈಗ ಅನ್‌ಎಂಪ್ಲಾಯ್‌ಡ್ ಗ್ರಾಜ್ಯುಯೇಟ್ಸ್‌ಗೆ ೧೫೦ ರೂಪಾಯಿಗಳ ರೆಮ್ಯುನರೇಷನ್ ಕೊಡುತ್ತಿದ್ದೀರಿ. ರಾಜ್ಯದ ೮ ಸಾವಿರ ಗ್ರಾಮಪಂಚಾಯತಿಗಳಿಗೆ ಮಾತ್ರ ಅವರ ಸೇವೆಯನ್ನು ಉಪಯೋಗಿಸಿಕೊಳ್ಳುವುದಕ್ಕೆ ನಿರ್ಧಾರ ಮಾಡಿದ್ದೀರಿ. ಈಗಾಗಲೇ ೮ ಸಾವಿರ ಗ್ರಾಜ್ಯುಯೇಟ್ಸ್‌ನ್ನು ಪಟ್ಟಣಕ್ಕೆ ಕರೆದುಕೊಂಡು ಹೋಗಿ ಅವರಿಂದ ಕೆಲಸ ಮಾಡಿಸಿಕೊಳ್ಳುತ್ತಿದ್ದೀರಿ, ಆದರ ಬದಲು ಗ್ರಾಮ ಮಟ್ಟದಿಂದ ಹಿಡಿದು ಪಂಚಾಯತಿ ವರೆಗೆ ಯಾವ ಅಸ್ಸಿಸ್‌ಮೆಂಟ್ ಕೆಲಸವನ್ನು ಅವರಿಗೆ ವಹಿಸಿಕೊಟ್ಟರೆ ತಾವು ಏನು ಅವರಿಗೆ ೧೫೦ ರೂಪಾಯಿಗಳ ರೆಮ್ಯುನರೇಷನ್ ಕೊಡುತ್ತಿದ್ದೀರಿ ಅದು ಸಾರ್ಥಕವಾಗುತ್ತದೆ. ಆ ಹಣವನ್ನು ತಾವು ಪಂಚಾಯತಿಯಿಂದ ರಿಕವರಿ ಮಾಡುವುದಕ್ಕೆ ಹೋಗಬೇಡಿ. ಈ ೮ ಸಾವಿರ ಜನರ ಸಹಾಯವನ್ನು ಉಪಯೋಗಿಸಿಕೊಂಡು ಈ ಕೆಲಸವನ್ನು ಅದಷ್ಟು ಜಾಗ್ರತೆ ಮಾಡಿ ಮುಗಿಸಬೇಕು; ಈ ಕಾರ್ಯವನ್ನು ತಾವು ಮಾಡಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಷಫೀ ಅಹಮದ್ (ತುಮಕೂರು).— ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ವಿಲೇಜ್ ಲೆವೆಲ್‌ನಲ್ಲಿ ನಮ್ಮ ವಿಲೇಜ್ ಅಕೌಂಟೆಂಟರಿಗೆ ಸಾಕಷ್ಟು ಕೆಲಸ ಇದೆ. ಅವರು ಇವತ್ತಿನ ದಿವಸ ಲೋಕಲ್ ರೆಕಾರ್ಡ್ಸ್, ಪಹಾಣಿ ರೆಕಾರ್ಡ್ಸ್ ಮೈನ್‌ಟೈನ್ ಮಾಡುವುದು, ಕಂದಾಯ ವಸೂಲಿ ಮಾಡುವುದು ಮತ್ತು ಇತರ ಬೇರೆ ಕೆಲಸಗಳನ್ನೂ ಮಾಡುತ್ತಾರೆ. ಆದರಲ್ಲಿ ಅವರು ತಮ್ಮ ಕರ್ತವ್ಯವನ್ನು ಚನ್ನಾಗಿ ನಿರ್ವಹಿಸಲು ಅವರಿಗೆ ಆಸಿಸ್ಟೆಂಟ್ಸ್ ಕೊಡಬೇಕಾಗಿದೆ. ಅವರು ನಿರ್ವಹಿಸತಕ್ಕ ಸ್ಟೈಫಂಡರಿ ಎಂಪ್ಲಾಯ್‌ಮೆಂಟ್ ಪ್ರೋಗ್ರಾಂನಲ್ಲೂ ಸಹ ಅವರಿಗೆ ಇಬ್ಬರು ಆಸಿಸ್ಟೆಂಟ್‌ಗಳನ್ನು ಕೊಟ್ಟರೆ ಒಳ್ಳೆಯದಾಗುತ್ತದೆ. ಇನ್ನೊಂದು ವಿಚಾರವೇನೆಂದರ ರೂರಲ್ ಎಂಪ್ಲಾಯ್‌ಮೆಂಟ್ ಪ್ರೋಗ್ರಾಂನಲ್ಲಿ ವಿಲೇಜ್ ಲೆವಲ್ ವರ್ಕರ್ಸ್‌ಗೆ ಹೆಚ್ಚಿನ ಗಮನಕೊಟ್ಟು ಅವರಿಗೆ ಕೆಲಸ ಕೊಡಬೇಕು ಮತ್ತು ವಿಲೇಜ್ ಅಗ್ರಿಕಲ್ಚರಲ್ ಲೇಬರರ್ಸ್‌ಗೂ ಅದರಲ್ಲಿ ಅವಕಾಶ ಮಾಡಿಕೊಡಬೇಕು. ಅಲ್ಲಿ ವಿಲೇಜ್ ಲೆವಲ್ ವರ್ಕರ್ಸ್‌ಗೆ ೨ ರೂ ಅಥವಾ ೩ ರೂಪಾಯಿಗಳಷ್ಟು ಕೂಲಿ ಕೊಡುತ್ತಿದ್ದಾರೆ. ಅದು ಅವರಿಗೆ ಸಾಕಷ್ಟು ಆಗುತ್ತಾ ಇಲ್ಲ. ಸರ್ಕಾರದವರು ಇದಕ್ಕೆ ಹೆಚ್ಚಿನ ಗಮನ ನೀಡಬೇಕು ಮತ್ತು ಪಿ.ಡಬ್ಲ್ಯೂ.ಡಿ. ಷೆಡ್ಯೂಲ್ ಪ್ರಕಾರ ಅವರಿಗೆ ಕೂಲಿಯನ್ನು ಕೊಡಿಸಿಕೊಡಬೇಕು ಎಂದು ಹೇಳುತ್ತೇನೆ. ಮತ್ತೊಂದು ವಿಚಾರವೇನೆಂದರೆ ವಿಲೇಜ್ ಸೆಕ್ರೆಟರಿಗಳಿಗೆ, ವಿಲೇಜ್ ಲೆವಲ್ ವರ್ಕರ್ಸ್‌ಗೆ ಅಲ್ಲಲ್ಲಿ ಇರುವುದಕ್ಕೆ ವಸತಿ ವ್ಯವಸ್ಥೆಯಿಲ್ಲ, ಅದನ್ನೂ ಅವರಿಗೆ ಕಲ್ಪಿಸಿಕೊಡಬೇಕು ಎಂದು ಹೇಳುತ್ತೇನೆ. ಈ ರೂರಲ್ ಏರಿಯಾಸ್‌ನಲ್ಲಿ ಅಸ್ಸಿಸ್‌ಮೆಂಟ್ ಆಫೀಸರ್ಸ್ ಏನಿದ್ದಾರೆ ಅವರು ಕರೆಕ್ಟಾಗಿ ಅಸೆಸ್ ಮಾಡುತ್ತಾ ಇಲ್ಲ. ಈ ವಿಚಾರದಲ್ಲಿ ತಾವು ಅಸಿಸ್ಟೆಂಟ್ ಕಮಿಷನರಿಗೆ ಅಧಿಕಾರ ಕೊಟ್ಟು ಸಾಕಷ್ಟು ಹೆಚ್ಚಿನ ರೀತಿಯಲ್ಲಿ ಸರಿಯಾಗಿ ಅಸೆಸ್‌ಮೆಂಟ್ ಮಾಡಿಸಬೇಕು. ಇನ್ನು ರೂರಲ್ ಡೆವೆಲಪ್‌ಮೆಂಟ್ ಏರಿಯೋದಲ್ಲಿ ಬೇಕಾದಷ್ಟು ಕಂದಾಯದ ಅರಿಯರ್ಸ್ ಹಣ ಬಾಕಿ ನಿಂತಿದೆ. ಅದನ್ನು ವಸೂಲು ಮಾಡುವುದಕ್ಕೆ ಒಂದು ಕಾನೂನನ್ನು ಮಾಡಿ ಅದನ್ನು ವಸೂಲು ಮಾಡಿಸಬೇಕು ಎಂದು ಹೇಳುತ್ತೇನೆ. ಕೊನೆಯದಾಗಿ ವಿಲೇಜ್‌ಗಳಲ್ಲಿ ಕಾರ್ಮಿಕರು ಏನಿದ್ದಾರೆ ಅವರನ್ನು ವಿಲೇಜ್ ಲೆವಲ್ ವರ್ಕರ್ಸ್ ಮುಖಾಂತರ ಸಂಘಟನೆಗೊಳಿಸಬೇಕು. ಅದನ್ನು ಮಾಡಿದರೆ ಒಳ್ಳೆಯದಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪ್ರಭಾಕರ್ (ನೆಲಮಂಗಲ).—ಮಾನ್ಯ ಅಧ್ಯಕ್ಷರೇ, ಗ್ರಾಮಪಂಚಾಯತಿಗಳಿಗೆ ಅಧಿಕಾರವನ್ನು ಕೊಡುವುದರಿಂದ ಅವು ಸ್ವಯಂ ಆಡಳಿತ ಸಂಸ್ಥೆಗಳಾಗಿ ಪರಿಣಮಿಸಬೇಕು ಎನ್ನತಕ್ಕಂಥ ಆಸೆ ಅನೇಕ ವರ್ಷಗಳಿಂದ ಏನಿತ್ತೋ ಅದನ್ನು ಸರ್ಕಾರದವರು ಕಾರ್ಯಗತ ಮಾಡುವ ಉದ್ದೇಶದಿಂದ ಈ ಒಂದು ಬಿಲ್ಲನ್ನು ತಂದಿದ್ದಾರೆ. ಕಳೆದ ಸಾಲಿನ ದಿನಾಂಕ ೨೬-೧೦-೧೯೬೯ರಲ್ಲಿ ಗ್ರಾಮ ಪಂಚಾಯತಿಯ ಅಧ್ಯಕ್ಷರು, ತಾಲ್ಲೂಕು ಬೋರ್ಡ್ ಅಧ್ಯಕ್ಷರು ಮುಂತಾದ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಯಾವ ಒಂದು ಅಧಿಕಾರವರ್ಗದವರು ಇದ್ದರೋ ಅವರನ್ನೆಲ್ಲಾ ಬೆಂಗಳೂರಿಗೆ ಕರೆಸಿ ಅವರ ಆಶೋತ್ತರಗಳನ್ನು ತಿಳಿದುಕೊಂಡು ಅವರಿಗೆ ಏನೇನು ಕೊರತೆ ಇದೆ ಎನ್ನುವುದರ ಬಗ್ಗೆ ಆಲೋಚನೆ ಮಾಡಿ ಅವರಿಗೆ ಉಚಿತವಾಗಿ ಬೇಕಾಗಿರತಕ್ಕಂಥ ಕಾನೂನು ಸಲಹೆ ಮತ್ತು ಹಣದ ಸಹಾಯ, ಹಾಗೂ ತಾಂತ್ರಿಕ ವ್ಯವಸ್ಥೆಗಳನ್ನು ಒದಗಿಸಿಕೊಡತಕ್ಕಂಥ ಒಂದು ಭರವಸೆಯವನ್ನು ಸರ್ಕಾರದವರು

ಕೊಟ್ಟಿದ್ದಾರೆ. ಇದಕ್ಕನುಸಾರವಾಗಿ ಮತ್ತು ಕಂದಾಯ ವಸೂಲು ಮಾಡುವುದರಲ್ಲಿ ಅಧಿಕಾರ ಕಾನೂನು ಪ್ರಕಾರ ಇದ್ದರೂ ಕೂಡ ಗ್ರಾಮಪಂಚಾಯತಿಯವರು ಈ ಅಧಿಕಾರವನ್ನು ಚಲಾಯಿಸುವುದರಲ್ಲಿ ಕರ್ತವ್ಯ ಲೋಪ ಮಾಡಿದ್ದರಿಂದ ೩ ಕೋಟಿ ರೂಪಾಯಿಗಳಿಗೂ ಮೇಲ್ಪಟ್ಟು ಕಂದಾಯ ಮುಲ್ಕಿ ಇದ್ದು, ಇದರಿಂದ ಕೆಲಸಕಾರ್ಯಗಳು ಸರಿಯಾಗಿ ನಡೆಯುವುದಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದು, ಈ ಹಣವನ್ನು ಹೇಗಾದರೂ ಅವರಿಗೆ ಒದಗಿಸಿಕೊಡಬೇಕೆಂಬ ದೃಷ್ಟಿಯಿಂದ ಕಂದಾಯ ನಿಗಧಿ ಮಾಡತಕ್ಕಂಥ ಅಧಿಕಾರಿಗಳನ್ನು (ಅಸೆಸರ್ಸ್) ಪಂಚಾಯತಿಗಳಿಗೆ ಒದಗಿಸಿಕೊಡಬೇಕೆಂಬ ನಿರೂಪಣೆಯನ್ನು ಈ ಬಿಲ್ಲಿನಲ್ಲಿ ಮಾಡಿದ್ದಾರೆ. ೮ ಸಾವಿರಕ್ಕೂ ಮೇಲ್ಪಟ್ಟು ಇರತಕ್ಕಂಥ ಪಂಚಾಯತಿಗಳಿಗೆ ಕಂದಾಯ ನಿರ್ವಾಪಕರಂಗಳನ್ನು ಒದಗಿಸಿಕೊಡುವುದರಲ್ಲಿ, ಆ ಹುದ್ದೆಗಳಿಗೆ ಅವರನ್ನು ಜಿಲ್ಲಾಧಿಕಾರಿಯವರೇ ಅಪಾಯಿಂಟ್ ಮಾಡಬೇಕು ಎಂಬುದಾಗಿ ಸೂಚಿಸಿದ್ದಾರೆ. ಈ ೮ ಸಾವಿರ ಜವಾಬ್ದಾರಿಯಿಂತರಾದ ಅಧಿಕಾರಿಗಳನ್ನು ಒದಗಿಸಿಕೊಡುವುದರಲ್ಲಿ ಈ ಹುದ್ದೆಗಳಲ್ಲನ್ನು ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಭರ್ತಿ ಮಾಡಬೇಕೂ ಎನ್ನುವುದು ಉಚಿತವಾಗಿ ಕಾಣುತ್ತದೆ. ಏಕೆಂದರೆ ಇದನ್ನು ಕೇವಲ ಡೆಪ್ಯುಟಿ ಕಮಿಷನ್‌ನವರು ಮಾಡುವುದರಿಂದ ಅನೇಕ ನ್ಯೂನತೆಗಳು ಕಂಡುಬಂದು ಯಾವಯಾವ ಹುದ್ದೆಗಳು ರೇಷಿಯೋ ಪ್ರಮಾಣದಲ್ಲಿ ಯಾರ್ಯಾರಿಗೆ ಸೇರಬೇಕು ಎನ್ನುವ ತೊಡಕು ಸರ್ಕಾರದವರ ಮುಂದೆ ಬರುವುದು ಬೇಡ. ಈ ಹಂತದಲ್ಲೇ ಇದನ್ನು ಸರಿಪಡಿಸಬೇಕೂ ಎನ್ನತಕ್ಕಂಥ ಸೂಚನೆಯನ್ನು ನಾನು ಸರ್ಕಾರದವರಿಗೆ ಕೊಡುತ್ತಿದ್ದೇನೆ.

ಸ್ವಾಮಿ, ತಾವು ಇಲ್ಲಿ ತಂದಿರತಕ್ಕ ಬಿಲ್‌ನಲ್ಲಿ " The pay and allowance of the Assessor will be met out from the respective village panchayat funds" ..... ಎಂಬ ಹೇಳಿದ್ದೀರಿ. ಇದು ಸರಿಯಲ್ಲ. ನಾವು ನಿಮಗೆ ಇಂತಿಷ್ಟು ಹಣವನ್ನು ಒದಗಿಸಿಕೊಡುತ್ತೇವೆ. ಆದರ ಜೊತೆಗೆ ನೀವು ನಿಮ್ಮ ವ್ಯಾಪ್ತಿಯಲ್ಲಿ ಕಂದಾಯ ಹಾಕಿಕೊಳ್ಳುವುದರ ಮೂಲಕ ಇನ್ನುಳಿದ ಹಣವನ್ನು ಒದಗಿಸಿಕೊಳ್ಳಿ ಎಂದು ಹೇಳಿದ್ದೀರಿ. ಆದರೆ ಇವತ್ತಿನದಿವಸ ಗ್ರಾಮಪಂಚಾಯಿತಿಯವರು ತಾವು ಕೈಗೊಳ್ಳತಕ್ಕ ಕಾರ್ಯಗಳನ್ನೇ ನಿರ್ವಹಿಸಲು ಹಣ ಸಾಕಾಗುತ್ತಿಲ್ಲ. ಇದು ಸರ್ಕಾರದವರಿಗೆ ಚೆನ್ನಾಗಿ ಗೊತ್ತಿರತಕ್ಕ ವಿಚಾರ. ಎಷ್ಟೋ ಹಳ್ಳಿಗಳಲ್ಲಿ ಕುಡಿಯುವ ನೀರಿಗೆ, ಬೀದಿ ದೀಪಕ್ಕೇ ಹಣಕಟ್ಟಲು ಅವರಿಗೆ ಸಾಧ್ಯವಿರುವುದಿಲ್ಲ. ನಾವು ಪಂಚಾಯಿತಿಯವರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದರೂ ಕೂಡ ಅದರ ದುಡ್ಡನ್ನು ಕಟ್ಟುವುದಕ್ಕೆ ಇಲ್ಲದೆ ಕತ್ತಲಲ್ಲಿ ಓಡಾಡುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಪಂಚಾಯಿತಿ ಅಧಿಕಾರಿಗಳ ಸಂಬಳವನ್ನೂ ನಿಮ್ಮ ವರಮಾನದಲ್ಲಿಯೇ ಕೊಡಿ ಎಂದು ತಾವು ಹೇಳುವುದಾದರೆ, "ಹೋದೆಯಾ ಪಿಶಾಚಿ ಬಾಗಿಲಲ್ಲಿ, ಎಂದರೆ ಬಂದೆ ಗವಾಕ್ಷಿಯಲ್ಲಿ" ಎನ್ನುವಂತಾಗಿದೆ. ಆದುದರಿಂದ ಅಸೆಸರ್ಸ್‌ಗೆ ಕೊಡತಕ್ಕ ಹಣವನ್ನು ಪಂಚಾಯಿತಿಯವರೇ ಕೊಡಬೇಕೆಂಬ ತಮ್ಮ ಸೂಚನೆಯನ್ನು ಕೈಬಿಟ್ಟು ಅದನ್ನು ಸರ್ಕಾರದವರೇ ಕೊಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಮೂರನೆಯದಾಗಿ ಗ್ರಾಮಪಂಚಾಯಿತಿಗಳು ಚೆನ್ನಾಗಿ ಕೆಲಸ ಮಾಡಬೇಕೆಂಬ ಉದ್ದೇಶದಿಂದ ತಾವು ಡೀಸೆಂಟ್ರಲೈಸೇಷನ್ ಆಫ್ ಪವರ್ಸ್ ಎಂದು ಮಾಡಿದ್ದೀರಿ. ಆದರೆ ಇದರಿಂದ ಏನು ಪ್ರಯೋಜದ ಎಂಬುದನ್ನು ತಾವು ಯೋಚನೆ ಮಾಡಬೇಕು. ತಾವು ಕೊಟ್ಟರತಕ್ಕ ಅಧಿಕಾರ ಕನ್ನಡಿಯೊಳಗಿನ ಕಜ್ಜಾಯದಂತೆ ಆಗಬಾರದು. ಕನ್ನಡಿಯಲ್ಲಿ ಕಜ್ಜಾಯವನ್ನು ತೋರಿಸಿ ಅದನ್ನು ತಿನ್ನು ಎಂದರೆ ತಿನ್ನುವುದಕ್ಕೆ ಸಾಧ್ಯವೆ ? ಗ್ರಾಮ ವೈದ್ಯಾಧಿಕಾರಿಗಳು, ಶಾಲಾ ಉಪಾಧ್ಯಾಯರು, ಪಂಚಾಯಿತಿ ಅಧ್ಯಕ್ಷರು, ಇನ್ನೂ ಮುಂತಾದವರು ಗ್ರಾಮಮಟ್ಟದಲ್ಲಿ ಸಾಕಷ್ಟು ಜನ ಇದ್ದಾರೆ. ಇವರೆಲ್ಲರನ್ನೂ ಒಟ್ಟಿಗೆ ಕೂಡಿಸಿ ಒಂದು ಕೋಆರ್ಡಿನೇಷನ್ ಕಮಿಟಿ ಎಂದು ಮಾಡಿ ತನ್ಮೂಲಕ ಆ ಗ್ರಾಮದ ಎಲ್ಲ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳಬೇ ಎಂದು ಹೇಳಬಯಸುತ್ತೇನೆ. ಇದನ್ನು ತಾವು ತಮ್ಮ ಬಿಲ್‌ನಲ್ಲಿ ಸೇರಿಸಿದರೆ ಸರ್ಕಾರದ ಧ್ಯೇಯ ಸಾರ್ಥಕವಾಗುತ್ತದೆ.

ಇನ್ನೊಂದು ಹೆಚ್ಚಿನ ತೊಡಕು ಏನೆಂದರೆ, ಗ್ರಾಮಮಟ್ಟದಲ್ಲಿ ತಾವು ವಿಲೇಜ್ ಸೈಟ್ ಸರ್ವೆ ಕೆಲಸವನ್ನು ಮಾಡಿದೇ ಹೋದರೆ ಅಸೆಸ್‌ಮೆಂಟ್ ಅಧಿಕಾರಿಯಂ ಯಾವರೀತಿಯಲ್ಲಿ ಅಸೆಸ್ ಮಾಡಬೇಕು ? ಗ್ರಾಮಪಂಚಾಯಿತಿಗೆ ಸಂಬಂಧಪಟ್ಟಂಥ ಜಮೀನು ಎಷ್ಟಿದೆ, ಅದರ ಚೆಕ್ಕುಬಂದಿ ಯಾವುದು ಎಂಬುದು ಗೊತ್ತಾಗದೇ ಹೋದರೆ ಏನು ಮಾಡುವುದಕ್ಕೆ ಸಾಧ್ಯ ? ಯಾರೋ ಒಬ್ಬ ವ್ಯಕ್ತಿಗೆ ಇರತಕ್ಕ ಜಮೀನನ್ನು ಆಳತೆ ಮಾಡಿ ಆ ಜಮೀನು ಎಷ್ಟಿದೆ ಅದಕ್ಕೆ ತಕ್ಕಂತೆ ಕಂದಾಯವನ್ನು ಹಾಕಬೇಕು. ಅಸೆಸ್ ಮಾಡತಕ್ಕ ಅಧಿಕಾರಿಗೆ ಆ ಜಮೀನು ಗೊತ್ತಾಗಬೇಕಾದರೆ, ಚೆಕ್ಕುಬಂದಿ ತಿಳಿಯಬೇಕಾದರೆ ಆ ಜಮೀನಿನ ಸರ್ವೆ

ಕೆಲಸ ಆಗಬೇಕು. ಇಲ್ಲದೇ ಹೋದರೆ ಅವರ ಮಾಲೀಕ ತನ್ನ ಸ್ವಾಧೀನದಲ್ಲಿ ಜಮೀನು ಎಷ್ಟಿದೆ ' ಎಂದು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಚೆಕ್ಕುಬಂದಿ ನೋಡದೆ ಕಂದಾಯ ಹಾಕುವುದಾದರೆ ನಾಳೆ ಅದು ಕೋರ್ಟಿಗೆ ಹೋದಾಗ ಬಿದ್ದು ಹೋಗುತ್ತದೆ.

ಆದುದರಿಂದ ತಾವು ತಂದಿರತಕ್ಕ ಬಿಲ್‌ನಲ್ಲಿ ಇನ್ನೂ ಕೆಲವಾರು ತಿದ್ದುಪಡಿಗಳನ್ನು ಅಳವಡಿಸಿ ಕೊಂಡು ಒಂದು ಸಮಗ್ರವಾದ ಬಿಲ್‌ನ್ನು ಸಭೆಯ ಮುಂದೆ ತರಬೇಕೆಂದು ಪ್ರಾರ್ಥಿಸುತ್ತೇನೆ.

† ಶ್ರೀ ಬಿ. ಇ. ರಾಮಯ್ಯ (ಗ್ರಾಮಾಭಿವೃದ್ಧಿ ಹಾಗೂ ಪಂಚಾಯಿತಿ ರಾಜ್ಯ ಮಂತ್ರಿಯವರು).— ಸನ್ಮಾನ್ಯ ಸಭಾಧ್ಯಕ್ಷರೆ, ಇದುವರೆಗೆ ಮಾತನಾಡಿದ ಮಾನ್ಯ ಸದಸ್ಯರುಗಳು ಬಹಳ ಉತ್ತಮ ಸಲಹೆಗಳನ್ನು ನೀಡಿದ್ದಾರೆ. ಆ ಸಲಹೆಗಳನ್ನೆಲ್ಲಾ ನಾವು ಗಮನದಲ್ಲಿಟ್ಟುಕೊಂಡು ಇದರ ಬಗ್ಗೆ ಸಾಕಷ್ಟು ಅಧ್ಯಯನ ಮಾಡುತ್ತೇವೆ.

ಮಾನ್ಯ ಸದಸ್ಯರಾದ ಶ್ರೀಮಾನ್ ಶಿವಪ್ಪನವರು ಪ್ರಜಾಪ್ರಭುತ್ವದ ಮೇಲೆ ಮಾತನಾಡುತ್ತಾ ಅಕ್ಕಿಯ ಮೇಲೆ ಆಸೆ ಸಿಂಟರ ಮೇಲೆ ಪ್ರೀತಿ '' ಅನ್ನುವಂತಾಗಬಾರದೆಂದು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಶ್ರೀಮಾನ್ ಕೆ. ಪುಟ್ಟಾಕರ್‌ರವರು ತಮ್ಮದೇ ಆದ ಧಾಟಿಯಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅವನ್ನೆಲ್ಲಾ ನಾನು ಆಸಕ್ತಿಯಿಂದ ಕೇಳಿರುವುದರಿಂದ ಅವರು ಸೂಚಿಸಿರುವ ಸಲಹೆಗಳಲ್ಲಿ ಏನಾದರೂ ಕಾನೂನಿಗೆ ಅಳವಡಿಸಿಕೊಳ್ಳುವಂಥಾದ್ದು ಇದ್ದರೆ ಅದರ ಬಗ್ಗೆ ಅಧ್ಯಯನ ನಡೆಸುತ್ತೇವೆ. ಜನಸಾಮಾನ್ಯರಿಗೆ ತೊಂದರೆಯಾಗಬಹುದಾದ ಯಾವುದೇ ಕಾನೂನಿನ ತೊಡಕುಗಳಿದ್ದರೂ ಅವುಗಳನ್ನು ಬದಲಾಯಿಸಿ ಮಾಡಲು ಸಿದ್ಧವಾಗಿದ್ದೇವೆ.

ಇನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಕಕ್ಕಿಲಾಯರವರು ಎರಡು ವಿಚಾರಗಳನ್ನು ಏನು ಪ್ರಸ್ತಾಪ ಮಾಡಿದ್ದಾರೆಂದರೆ, ಮೊದಲನೆಯದಾಗಿ, ಅಸೆಸರ್‌ನ್ನು ನೇಮಕ ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಯವರಿಗೆ ಕೊಟ್ಟಿದ್ದೀರಿ. ಆದರೆ ಆ ಅಸೆಸರ್ಸ್ ಯಾರು ಎಂಬುದನ್ನು ಈ ಮಸೂದೆಯಲ್ಲಿ ನಿರ್ದಿಷ್ಟವಾಗಿ ಹೇಳಿಲ್ಲ ಎಂಬುದು. ಎರಡನೆಯದಾಗಿ ಅಸೆಸ್ ಮಾಡಿದ್ದನ್ನು ಪುನರ್ ಪರಿಶೀಲನೆ ಮಾಡುವ ಅಧಿಕಾರವನ್ನು ಅಸೆಸರ್‌ಗೆ ಮೇಲ್ಪಟ್ಟ ಸಮಾಪದಲ್ಲಿರತಕ್ಕಂಥ ಅಧಿಕಾರಿಗೆ ಕೊಡಬೇಕೆಂಬುದು. ಮಾನ್ಯ ಸದಸ್ಯರ ಪ್ರಶ್ನೆಯಲ್ಲಿ ದ್ವಂದ್ವಾರ್ಥ ಇದೆಯೆಂದು ನನಗೆ ಕಾಣುತ್ತಿದೆ. ಆದರೆ ಇಷ್ಟು ಮಾತ್ರ ಹೇಳಬಯಸುತ್ತೇನೆ. ನಾವು ತಂದಿರತಕ್ಕ ಈ ತಿದ್ದುಪಡಿಯು ಗ್ರಾಮಪಂಚಾತಿಗಳ ಕೆಲಸಕಾರ್ಯಗಳು ಅತ್ಯಂತ ಪರಿಣಾಮಕಾರಿಯಾಗಿ ನಡೆಯಬೇಕೆಂಬ ಉದ್ದೇಶದಿಂದ ಕೂಡಿರುವುದರಿಂದ ಮಾನ್ಯ ಸಭೆಯು ಇದಕ್ಕೆ ತನ್ನ ಸಂಪೂರ್ಣ ಬೆಂಬಲವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

೧–೦೦ ಪಿ. ಎಂ.

ಒಬ್ಬ ಸದಸ್ಯರು .— ಮಾನ್ಯ ಸಚಿವರು ಒಂದು ಮಾತನ್ನು ಹೇಳುತ್ತಾ ೧೯೫೯ನೇ ಇಸವಿಯಿಂದ ಪಂಚಾಯಿತಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಆದಕ್ಕೋಸ್ಕರವಾಗಿ ಈ ಶಾಸನವನ್ನು ತರಬೇಕಾಯಿತು ಎಂದು ಹೇಳುವುದಾದರೆ, ಶಾಸನಗಳನ್ನು ಮಾಡತಕ್ಕಂಥ ಶಾಸನಸಭೆ ಮತ್ತು ಶಾಸಕರು ಏನು ನಾವು ಏತಕ್ಕೆ ಇರಬೇಕು. ಎಲ್ಲವನ್ನು ವಜಾಮಾಡಿಬಿಟ್ಟು, ಎಲ್ಲವನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೇನೇ ವಹಿಸಿಕೊಟ್ಟುಬಿಡೋಣವೆಂದು ಹೇಳುತ್ತೇನೆ.

ಶ್ರೀ ಬಿ. ಇ. ರಾಮಯ್ಯ .— ಮಾನ್ಯ ಸದಸ್ಯರು ಹೇಳಿರತಕ್ಕಂಥದ್ದಕ್ಕೆ ಈಗಾಗಲೇ ನಾನು ಹೇಳಿದ್ದೇನೆ. ೧೯೫೯ ರಿಂದ ವಿಲೇಜ್ ಪಂಚಾಯಿತ್ ಮತ್ತು ಲೋಕಲ್ ಬೋರ್ಡ್‌ಗಳಿಗೆ ಕಂದಾಯವನ್ನು ಹಾಕತಕ್ಕಂಥಾದ್ದು ಮತ್ತು ಕಲೆಕ್ಟ್ ಮಾಡತಕ್ಕಂಥಾದ್ದು ಎರಡೂ ಅಧಿಕಾರವನ್ನು ಕೊಟ್ಟಿದ್ದೆವು. ಆದರೆ ಅವುಗಳು ಸಮರ್ಥ ರೀತಿಯಲ್ಲಿ ಕೆಲಸವನ್ನೂ ನಿರ್ವಹಿಸಲು ಸಾಧ್ಯವಾಗದ ಕಾರಣ ಈ ಒಂದು ತಿದ್ದುಪಡಿ ಮಸೂದೆಯನ್ನು ತಂದಿರಲಾಗಿರುತ್ತದೆ. ಮಾನ್ಯ ಸದಸ್ಯರು ಈಗಲೂ ಹಾಗೆಯೇ ಮುಂದುವರಿಯಲಿ ಎಂದು ಹೇಳತಕ್ಕಂಥಾದ್ದು ಸರಿಯಲ್ಲ.

MR. SPEAKER.— The question is :

"The Karnataka Village Panchayat and Local Boards (Amendment) Bill, 1980, " be taken into consideration.

The motion was adopted.

CLAUSES 2 to 4.

MR. SPEAKER .— As there are no amendments, I will put clauses 2 to 4, to the vote of the House.

The question is :

" That clauses 2 to 4, both inclusive, do stand part of the Bill. "

The motion was adopted.

Clauses 2 to 4, both inclusive, were added to the Bill.

CLAUSE 1 ETC.

MR. SPEAKER .— The question is :

" That Clause 1, the long Title, the Preamble and the enacting formula do stand part of the Bill. "

The motion was adopted.

That clause 1, the Long Title, the Preamble and the enacting formula were added to the Bill

Motion to pass

SRI B. RAMAIAH .— I beg to move :

" That the Karnataka Village Panchayat and Local Boards (Amendment) Bill, 1980 be passed.

MR. SPEKER .— The question is :

" That the Karnataka Village Panchayat and Local Boards (Amendment) Bill, 1980 be passed. "

The motion was adopted and the Bill was passed.

ಶ್ರೀ ಎಚ್. ಗಂಗಾಧರನ್.—ಬೆಂಗಳೂರು ನಗರದ ಚಾಮರಾಜಪೇಟೆಯಲ್ಲಿ ನಡೆದಂಥ ಒಂದು ಘಟನೆಯಿಂದಾಗಿ ಈ ಸದನದ ಸದಸ್ಯರಾದ ಶ್ರೀಮಾನ್ ಇಬ್ರಾಹಿಂರವರೂ ಮತ್ತು ಕುಮಾರಿ ಎಸ್. ಪುಟ್ಟಿಳಾರವರ ಮೇಲೆ ಸರ್ಕಾರ ಒಂದು ಮೊಕದ್ದಮೆಯನ್ನು ಹೂಡಿತ್ತು. ಆಗ ಇಬ್ರಾಹಿಂ ಸಾಹೇಬರು ಜನತಾದಲ್ಲಿ ಇದ್ದರು. ಅವರು ಈಗ ಕಾಂಗ್ರೆಸ್-(ಐ)ನಲ್ಲಿ ಸೇರಿ ಮಂತ್ರಿಗಳಾಗಿದ್ದಾರೆ. ಇವರ ಮೇಲೆ

ಹೂಡಿದ್ದ ಮೊಕದ್ದಮೆಯನ್ನು ಸರ್ಕಾರ ವಾಪಸ್ ತೆಗೆದುಕೊಂಡಿದೆ. ಆದರೆ ಕುಮಾರಿ ಪ್ರಮಿಳಾ ಅವರ ಮೇಲೆ ಹೂಡಿರುವ ಮೊಕದ್ದಮೆಯನ್ನು ವಾಪಸ್ ತೆಗೆದುಕೊಂಡಿಲ್ಲ. ಪೋಲೀಸ್‌ನವರು ಕೊಟ್ಟಿರ ತಕ್ಕಂಥ ವಿವರಣೆಯ ಪ್ರಕಾರ ಅವರ ಮೇಲೆ ಹೂಡಿರುವ ಮೊಕದ್ದಮೆಯ ಬಗ್ಗೆ ಹೈಕೋರ್ಟಿನಲ್ಲಿ ಚಾಲೆಂಜ್ ಮಾಡಿರುವುದರಿಂದ ವಾಪಸ್ ತೆಗೆದುಕೊಂಡಿಲ್ಲವೆಂದು ಹೇಳಿರುತ್ತಾರೆ. ಶ್ರೀಯುತ ಇಬ್ರಾಹಿಂ ರವರ ಮೇಲೆ ಇರತಕ್ಕಂಥ ಮೊಕದ್ದಮೆಯನ್ನು ವಾಪಸ್ ತೆಗೆದುಕೊಳ್ಳಲು ಏನು ಕಾರಣವನ್ನು ಕೊಟ್ಟಿದ್ದಾರೋ ಅದೇ ಆಧಾರದ ಮೇಲೆ ಕುಮಾರಿ ಪ್ರಮಿಳಾರವರ ಮೇಲೆ ಇರತಕ್ಕಂಥದ್ದನ್ನು ವಾಪಸ್ ಪಡೆಯಬಹುದಾಗಿತ್ತು. ಶ್ರೀಮತಿ ಪ್ರಮಿಳಾರವರು ಜಾಮೀನು ಕೊಟ್ಟಿರುತ್ತಾರೆ, ಸರ್ಕಾರ ಜಾಮೀನನ್ನು ರದ್ದುಮಾಡಿ ಅಪೀಲ್ ಹೋದರೆ ಇದು ಒಂದು ಪಕ್ಷಾತೀತ ಮನೋಭಾವನೆ ತೋರಿಸಿದಂತಾಗುತ್ತದೆ. ಅಂದರೆ ಒಬ್ಬ ಮಹಿಳಾ ಸದಸ್ಯರು ವಿರೋಧ ಪಕ್ಷದಲ್ಲಿದ್ದುಕೊಂಡು ಕಾರ್ಯನಿರ್ವಹಿಸುವುದು ಸರ್ಕಾರಕ್ಕೆ ಬೇಕಾಗಿಲ್ಲವೆಂದು ತಿಳಿದುಕೊಳ್ಳಬೇಕಾಗುತ್ತದೆ. ಕುಮಾರಿ ಪ್ರಮಿಳಾರವರು ಅವರ ಕ್ಷೇತ್ರದಲ್ಲಿ ಜನತೆಯನ್ನು ಕುರಿತು ಮಾತನಾಡಬಾರದೆಂದು ಪೋಲೀಸ್‌ನವರು ನೋಟೀಸ್ ಕೊಟ್ಟಿರತಕ್ಕಂಥಾದ್ದನ್ನು ನಾವು ನೋಡಿರುತ್ತೇವೆ. ನೀವು ಅಧಿಕಾರದಲ್ಲಿ ಇರತಕ್ಕಂಥ ಕಾಲದಲ್ಲಿ ವಿರೋಧ ಪಕ್ಷದ ಸದಸ್ಯರ ಬಗ್ಗೆ ಪಕ್ಷಾತೀತ ಮನೋಭಾವನೆಗೆ ಅವಕಾಶ ಆಗಬಾರದು. ಈವತ್ತಿನದಿವಸ ಅವರ ಜಾಮೀನನ್ನು ರದ್ದುಮಾಡಿದ ಪಕ್ಷದಲ್ಲಿ ಅವರು ಸೆರೆಮನೆಯಲ್ಲಿ ಇರಬೇಕಾಗುತ್ತದೆ ಅದೇ ಮಾನ್ಯ ಇಬ್ರಾಹಿಂರವರು ಸರ್ಕಾರಿ ಭವನದಲ್ಲಿದ್ದುಕೊಂಡು ಸರ್ಕಾರಿ ಕಾರಿನಲ್ಲಿ ತಿರುಗಾಡಿಕೊಂಡು ಇರಬಹುದು. ಆದ್ದರಿಂದ ಒಬ್ಬರಿಗೆ ನ್ಯಾಯ ಇನ್ನೊಬ್ಬರಿಗೆ ಅನ್ಯಾಯವಾಗುತ್ತದೆ. ವಿರೋಧ ಪಕ್ಷದವರಾದ ಕುಮಾರಿ ಪ್ರಮಿಳಾರವರಿಗೂ ನ್ಯಾಯ ದೊರಕಿಸಿಕೊಟ್ಟು ಅವರಿಗೆ ರಕ್ಷಣೆ ಕೊಡಬೇಕೆಂದು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಶ್ರೀ ಎಚ್. ಗಂಗಾಧರನ್ ರವರು ಸರ್ಕಾರದವರು ಪಕ್ಷಾತೀತ ಮನೋಭಾವನೆಯಿಂದ ನಡೆದುಕೊಳ್ಳುತ್ತಿದ್ದಾರೆಂದು ಸ್ಪಷ್ಟಪಡಿಸಿದ್ದಾರೆ. ಈ ಸಂದರ್ಭದಲ್ಲಿ ನಾನಾದರೂ ಹೇಳುವುದು ಇಷ್ಟೇ. ಎಲ್ಲ ಸದಸ್ಯರ ಸಹಕಾರ ಪಡೆದು ನಾವು ಸರ್ಕಾರವನ್ನು ನಡೆಸಿಕೊಂಡು ಹೋಗಬೇಕು ಎನ್ನುವುದೇ ನಮ್ಮ ನೀತಿ ಮತ್ತು ನಮ್ಮ ಸದುದ್ದೇಶವಾಗಿರುತ್ತದೆಂದು ಈ ಬಗ್ಗೆ ಮೊದಲೇ ತಮ್ಮ ಜೊತೆಯಲ್ಲಿ ಮಾತನಾಡಿದ್ದೇನೆ. ಎಲ್ಲರಿಗೂ ರಕ್ಷಣೆ ಸಿಗಬೇಕು. ಯಾವುದೇ ತರಹದ ಅಶಾಂತಿಗೆ ಅವಕಾಶ ಮಾಡಿಕೊಡಬಾರದು ಎನ್ನುವುದೇ ಸರ್ಕಾರದ ಉದ್ದೇಶವಾಗಿರುತ್ತದೆ. ನಮ್ಮ ಸಹಕಾರದೊಂದಿಗೆ ನಿಮ್ಮ ಸಹಕಾರವು ಇರಬೇಕೆಂದು ಅಪೇಕ್ಷೆಪಟ್ಟು ಮಾನ್ಯ ಇಬ್ರಾಹಿಂ ಅವರ ಮೇಲೆ ಇರತಕ್ಕಂಥ ಮೊಕದ್ದಮೆಯನ್ನು ಯಾವರೀತಿ ವಿತ್‌ಡ್ರಾ ಮಾಡಿರುತ್ತೇವೆಯೋ ಅದೇ ಪ್ರಕಾರವಾಗಿ ಕುಮಾರಿ ಪ್ರಮಿಳಾರವರ ಮೇಲಿನ ಮೊಕದ್ದಮೆಯನ್ನು ವಿತ್‌ಡ್ರಾ ಮಾಡಿಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಈಗ್ಗೆ ಬೆಂಗಳೂರು ನಗರದಲ್ಲಿ ಏನು ಸಕ್ಕರೆಯ ಕಲಬೆರಕೆಯಾಗಿದೆ ಎಂಬ ವಿಷಯ ಇದೆ ಈ ರೀತಿ ಮಂಡ್ಯಾದಲ್ಲೂ ಆಗಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿ ಬಂದಿದೆ. ಮಂಡ್ಯಾದಲ್ಲೂ ಸಕ್ಕರೆಯಲ್ಲಿ ಕಬ್ಬಿಣದ ಚೂರುಗಳು ಕಂಡುಬಂದಿವೆಯೆಂದು ತಿಳಿದು ಬಂದಿದ್ದು ಈ ಬಗ್ಗೆ ಪೋಲೀಸಿನವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ? ಈ ಕಲಬೆರಕೆ ಕಾರ್ಖಾನೆಗಳಲ್ಲಿ ಆಗುತ್ತಿದೆಯೇ ಇಲ್ಲಾ ಗೋಡೋನ್‌ಗಳಲ್ಲಿ ಆಗುತ್ತಿದೆಯೇ ? ಈ ರೀತಿಯ ಕಬ್ಬಿಣದ ಚೂರುಗಳು ಮೈಯಲ್ಲಿ ಸೇರಿದರೆ ಕರಳು ಬೇನೆ ಬಂದು ಆದರ ಲಕ್ಷಣ ಕೆಲವಾರು ತಿಂಗಳುಗಳು ಆದಮೇಲೆ ಗೊತ್ತಾಗುತ್ತದೆ. ದಯಮಾಡಿ ಸರ್ಕಾರದವರು ಈ ಬಗ್ಗೆ ತೀವ್ರವಾದ ಕ್ರಮವನ್ನು ಕೈಗೊಳ್ಳಬೇಕು. ಈ ಬಗ್ಗೆ ಪೋಲೀಸರು ಯಾರು ತಪ್ಪಿತಸ್ಥರು ಎಂಬುದನ್ನು ಬೇಗ ಕಂಡುಹಿಡಿಯಬೇಕಾಗುತ್ತದೆ. ಈ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಮತ್ತೊಮ್ಮೆ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಈ ಕಲಬೆರಕೆಯ ಬಗ್ಗೆ ವಿಚಾರಣೆಗಳು ನಡೆಯುತ್ತಿವೆ. ಇದು ಬಹಳ ಗಂಭೀರವಾದ ವಿಷಯವಾದ್ದರಿಂದ ಈ ಬಗ್ಗೆ ಆಳವಾಗಿ ಯೋಚನೆ ಮಾಡಬೇಕಾಗುತ್ತದೆ. ಇಲ್ಲಿ ಯಾರು ತಪ್ಪಿತಸ್ಥರು ಇರುತ್ತಾರೆ ಅವರನ್ನು ಸುಮ್ಮನೆ ಬಿಡುವುದಿಲ್ಲ. ಅವರನ್ನ ಕಾನೂನಿನ ಕೆಳಗೆ ಶಿಕ್ಷಿಸಬೇಕಾಗುತ್ತದೆ.

ಇನ್ನು ಯುಗಾದಿ ಹಬ್ಬ ಇದ್ದು ಆ ಬಗ್ಗೆ ಹೆಚ್ಚಿಗೆ ಸಕ್ಕರೆಯನ್ನು ವಿತರಣೆ ಮಾಡಲು ಸಂಬಂಧಪಟ್ಟ ಇಲಾಖೆಯವರಿಗೆ ತಿಳಿಸಲಾಗಿದೆ. ಆ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಸಕ್ಕರೆ ಹಂಚುವಿಕೆಯ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳುತ್ತಾರೆ. ಇನ್ನು ಈ ಕಲಬೆರಕೆ ಮಾಡಿದವರು ಯಾರೆಂದು ವರದಿ ಬಂದಮೇಲೆ ತಿಳಿಯುತ್ತದೆ. ಆಗ ಅವರ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು.

ಶ್ರೀ ಎಂ. ವಿ. ರಾಜಶೇಖರನ್.—ನಾನು ರಾಜ್ಯದ ರೈತರ ಬಗ್ಗೆ ಒಂದು ಮುಖ್ಯವಾದ ವಿಷಯವನ್ನು ಹೇಳಿದ್ದು ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ಇದು ರಾಜ್ಯದ ರೈತರ ಸಮಸ್ಯೆಯಾಗಿದ್ದು ಈ ಬಗ್ಗೆ ಒಂದು ಸಮಿತಿಯನ್ನು ಮಾಡೋಣವೆಂದು ಹೇಳಿದ್ದಾರೆ. ಈ ಬಗ್ಗೆ ಆವರ ತಮ್ಮ ನಿಖರವಾದ ಅಭಿಪ್ರಾಯವನ್ನು ಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್. - ಶ್ರೀ ರಾಜಶೇಖರನ್ ಅವರು ರೈತರ ಬಗ್ಗೆ ಬಹಳ ಕೆಲಸ ಮಾಡಿದ್ದು, ಅವರಿಗೆ ರೈತರ ಮೇಲೆ ಬಹಳ ಆಸಕ್ತಿ ಇದೆ. ಆ ಬಗ್ಗೆ ಸಮಿತಿ ಮಾಡುತ್ತೇವೆಂದು ಹೇಳಿದ್ದೆ. ಆ ಸಮಿತಿಯನ್ನು ಮಾಡುವಾಗ ಶ್ರೀ ರಾಜಶೇಖರನ್ ಅವರೂ ಅದರಲ್ಲಿ ಇರುವಂತೆ ಏರ್ಪಾಟು ಮಾಡುತ್ತೇವೆ.

ಶ್ರೀ ಎಂ.ವಿ. ರಾಜಶೇಖರನ್. – ನನ್ನನ್ನು ಆ ಸಮಿತಿಯಲ್ಲಿ ಸೇರಿಸುವಾ, ಅಥವಾ ಬಿಡುವ ಪ್ರಶ್ನೆ ಅಲ್ಲ. ರೈತರ ಸಮಸ್ಯೆಗಳನ್ನು ಬಗೆಹರಿಸುವ ವಿಚಾರ ಇಲ್ಲಿ ಇದೆ.

ಶ್ರೀ ಆರ್. ಗುಂಡೂರಾವ್.—ಇದು ರೈತರ ಒಂದು ಪ್ರಮುಖವಾದ ವಿಚಾರವಾದ್ದರಿಂದಲೇ ಯೋಚನೆ ಮಾಡಿ ಉತ್ತರವನ್ನು ಕೊಡುತ್ತಿದ್ದೇನೆ. ರೈತರು ಎಂದರೆ, ಕಬ್ಬು ಬೆಳೆಯುವವರೂ ರೈತರೇ, ಯಾಲಕ್ಕಿ ಬೆಳೆಯುವವರೂ ರೈತರೇ, ಕಾಫಿ-ಟೀ ಬೆಳೆಯುವವರೂ ರೈತರೇ ಹಾಗೂ ಮೆಣಸಿನಕಾಯಿಯನ್ನು ಬೆಳೆಯುವವರೂ ಸಹಾ ರೈತರೇ. ಇವರೆಲ್ಲರಿಗೂ ಏನೇನು ತೊಂದರೆ ಇದೆ ಆ ಬಗ್ಗೆ ಸರ್ಕಾರ ತನ್ನ ಗಮನವನ್ನು ಹರಿಸಬೇಕಾಗುತ್ತದೆ. ಯಾವ ಯಾವ ಸಮಸ್ಯೆಗಳಿಗೆ ಆದಷ್ಟು ಬೇಗ ಗಮನವನ್ನು ಕೊಡಬೇಕು ಹಾಗೂ ಯಾವ ಯಾವ ಸಮಸ್ಯೆಗಳಿಗೆ ನಿಧಾನವಾಗಿ ಗಮನವನ್ನು ಕೊಡಬೇಕು ಎನ್ನುವುದರ ಬಗ್ಗೆ ಒಂದು ಸಮಿತಿಯನ್ನು ಮಾಡಿ ಅಲ್ಲಿ ನಿರ್ಧರಿಸಬೇಕಾಗುತ್ತದೆ. ರೈತರುಗಳ ಸಂಘಸಂಸ್ಥೆಗಳು ಇರುತ್ತವೆ, ಪ್ಲಾಂಟರುಗಳ ಅಸೋಸಿಯೇಷನ್ಸ್, ಇರುತ್ತವೆ, ಇವುಗಳ ಮುಖಂಡರುಗಳ ಜೊತೆ ಕುಳಿತು ಒಂದು ತಿಂಗಳ ಒಳಗೋ, ಇಲ್ಲಾ ಎರಡು ತಿಂಗಳುಗಳ ಒಳಗೋ ಇಲ್ಲಾ ಸಾಧ್ಯವಾದರೆ ೧೫ ದಿವಸಗಳ ಒಳಗೆ ಸಮಾಲೋಚನೆ ಮಾಡಿ ಸರ್ಕಾರದವರು ಈ ಬಗ್ಗೆ ವರದಿಯನ್ನು ತರಿಸಿ ಆ ಬಗ್ಗೆ ಚರ್ಚೆ ಮಾಡಿ ಏನೇನು ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳಬಹುದು. ಇದನ್ನು ಮಾಡಲು ಸರ್ಕಾರ ಬದ್ಧವಾಗಿದೆಯೆಂದು ಇಲ್ಲಿ ಹೇಳುತ್ತೇನೆ. ಇಷ್ಟಲ್ಲದೆ ಮತ್ತೇನೂ ಅಲ್ಲ.

ಅಧ್ಯಕ್ಷರು.—ಈಗ ಸಭೆಯು ಎದ್ದು ಮತ್ತೆ ಬುಧವಾರ ದಿನಾಂಕ ೨೬-೩-೧೯೮೦ರಂದು ಮಧ್ಯಾಹ್ನ ೧ ಗಂಟೆಗೆ ಮತ್ತೆ ಸೇರುವುದು.

(ಇಂದಿನ ಸಭೆಯ ಕಾರ್ಯಕಲಾಪಗಳು ಇಲ್ಲಿಗೆ ಮುಗಿದು ಮತ್ತೆ ಸಭೆ ೨೬-೩-೮೦ರ ಮಧ್ಯಾಹ್ನ ೧ ಗಂಟೆಗೆ ಸೇರುವುದು.)